

ಅದರ ಜೊತೆಗೆ ಅಚ್ಚರಿಯ ಸಂಗತಿಯೊಂದು ನಡೆಯಿತು. ತರಗತಿಯಲ್ಲಿ ಬೆಂಜಮಿನ್‌ನ ಅಂಕಗಳೂ ಏರತೊಡಗಿದವು. ಮನೆಯಲ್ಲಿನ ಟಿ.ವಿ. ಅರ್ಧಗಂಟೆಯ ಮನರಂಜನೆಯ ಸಾಧನವಷ್ಟೇ ಆಯಿತು. ಈಗ ಮಕ್ಕಳ ನರಶಸ್ತ್ರಚಿಕಿತ್ಸಾ ತಜ್ಞ ಮತ್ತು ಇಂಜಿನಿಯರ್ ಆಗಿದ್ದಾರೆ ಅಣ್ಣ – ತಮ್ಮ. ಆತನ ಜೀವನ ಪಯಣದ ಬಗ್ಗೆ ಕೇಳಿದಾಗ ಹೇಳಿದ್ದು 'ಈಗಲೂ ನನಗೆ ನನ್ನಂಥ ನಪಾಸಾಗುತ್ತಿದ್ದ, ಓದಿನ ಬಗ್ಗೆ ಕಾಳಜಿಯಿರದ ಶಾಲಾ ಬಾಲಕ ಅದು ಹೇಗೆ ಸ್ಕಾಲರ್‌ಶಿಪ್ ಮೇಲೆ ವೈದ್ಯನಾದೆ ಎಂಬುದು ಸುಲಭವಾಗಿ ಅರ್ಥವಾಗುವುದಿಲ್ಲ. ಆದರೆ ಈ ಪಯಣ ಎಲ್ಲಿ ಆರಂಭವಾಯಿತು ಎಂದು ಹೇಳಬಲ್ಲೆ. ನಮ್ಮ ಅಮ್ಮ 'ಟಿ.ವಿ' ಯನ್ನು ಆರಿಸಿ, ನಮ್ಮನ್ನು ಗ್ರಂಥಾಲಯಕ್ಕೆ ಕರೆದೊಯ್ದ ದಿನ!'

ಅಂದರೆ ಸಾಹಿತ್ಯದ ಓದಿಗೆ, ಕಥೆ ಪುಸ್ತಕಗಳನ್ನು ಮನಬಂದಂತೆ ಓದಿದರೆ ಮಕ್ಕಳು ಓದಿನಲ್ಲಿ ಹಿಂದೆ ಬೀಳುತ್ತಾರೆ ಎಂಬುದು ನಮ್ಮ ತಪ್ಪು ಕಲ್ಪನೆ. ತದ್ವಿರುದ್ಧವಾದ ಸಂಗತಿಯನ್ನು ಮಕ್ಕಳ ಸಂಶೋಧನೆಗಳು ನಿರೂಪಿಸಿವೆ. ತಂತ್ರಜ್ಞಾನ, ಅಪ್ಪ–ಅಮ್ಮಂದಿರ ಸೋಮಾರಿತನ ಮತ್ತವರ ಮಹಾತ್ವಾಕಾಂಕ್ಷೆಗಳು ಮಕ್ಕಳ ಕನಸುಗಳನ್ನು ಹಾಳುಗೆಡಿಸುತ್ತಿರುವ ಇಂದಿನ ದಿನಗಳಲ್ಲಿ ಸಾಹಿತ್ಯದ ಓದು, 'ಕಥೆ ಪುಸ್ತಕದ ಚಟ' ಮಾತ್ರ ಅವರ ಬಾಲ್ಯವನ್ನು ಅರಳಿಸಬಲ್ಲದು.

ಪೆಟ್ಟಿಗೆಗಳಿಂದ ಪುಸ್ತಕಕ್ಕೆ ಮರಳೋಣ! ರುವಾಲ್ಡ್ ಡಾಲ್‌ನ ಪುಸ್ತಕದ ಪಾತ್ರ ಫೆಂಟಾಸ್ಟಿಕ್ ಮಿ. ಫಾಕ್ಸ್ ಹೇಳಿದಂತೆ 'ನೀನೇನು ಹೇಳುತ್ತಿದ್ದೀಯ ಎಂಬುದು ನನಗೆ ಅರ್ಥವಾಗುತ್ತಿದೆ, ನಿನ್ನ ಅಭಿಪ್ರಾಯಗಳು ಅಮೂಲ್ಯ, ಆದರೆ ನಾನು ಅವುಗಳನ್ನು ಕೇಳುವುದಿಲ್ಲ' ಎಂಬ ಸ್ಥಿತಿಯಿಂದ ಹೊರಬರೋಣ. ನಮ್ಮ ಮಕ್ಕಳು, ಮಟಿಲ್ಡಾ ಹೇಳಿದಂತೆ 'ಮುಂದೇನು ಓದಲಿ ಎಂದು ಯೋಚಿಸುತ್ತಿದ್ದೇನೆ, ಮಕ್ಕಳ ಪುಸ್ತಕಗಳೆಲ್ಲಾ ಮುಗಿದಿವೆ!' ಎಂದು ಹೇಳುವವರಾಗಲಿ ಎಂಬ ಕನಸು ಕಾಣೋಣ!